## ಕಥೆ

ತಾಯದನಿಗಾಗಿ ಸುತ್ತ ತಿರುಗಿ ಸಣ್ಣಸಣ್ಣ ದನಿಗಳನ್ನು ಆಲೈಸುವ ಹಾಗೆ ಸಂತೋಷನ ಜೀವವು ತನ್ನ ಸ್ನೇಹಿತರ ಗುಂಪಿನ ಎಲ್ಲರ ಸಂಕಟಗಳಿಗೆ ಹೇಗೋ ಒದಗಿ ಬರುತ್ತಿದ್ದುದೆಲ್ಲ ನೆನಪಾಗಿ... ರಾಮಚಂದ್ರ ಕುಸುಮಳ ಹಸ್ತ ಹಿಡಿದು ನೇವರಿಸಿದ, ಅದುಮಿದ. ಅವನ ದುಃಖ ಹುದುಗಲಾರದೆ ಹೋಯಿತು.

ಹೇಗೋ ಸಾವರಿಸಿಕೊಂಡು ಅವರಿಬ್ಬರೂ ಸಂತೋಷನ ಮನೆ ಕಡೆ ಹೊರಟರು. ದಾರಿಯುದ್ದಕ್ಕೂ ಇಬ್ಬರ ನಡುವೆ ಒಂದೂ ಮಾತಿಲ್ಲ. ರಾಮಚಂದ್ರನ ಮನಸ್ಸು ಸಂತೋಷನನ್ನು ತನ್ನೊಳಗೆ ಮರುಸೃಷ್ಟಿಸಿಕೊಳ್ಳುತ್ತಲೇ ಹೋಯಿತು. ರಾಮಚಂದ್ರನಿಗೆ ಸಂತೋಷ ಕಟ್ಟಿದ್ದ ಬಿಲ್ಡಿಂಗಿನ ಆಕೃತಿಗಳು ಒಂದೊಂದಾಗಿ ಕಣ್ಮುಂದೆ ಬರತೊಡಗಿದವು. ಸಂತೋಷ ಓದಿದ್ದು ಸಿವಿಲ್ ಇಂಜಿನಿಯರಿಂಗ್. ಆದರೆ, ಓದು ಮುಗಿಸುವ ಮುಂಚೆಯೇ ಅವನಿಗೆ ಕಟ್ಟಡ ಕಟ್ಟುವ, ಅದಕ್ಕೆ ವಿನ್ಯಾಸ ನೀಡುವ ಕಲೆಯು ತನ್ನ ತಂದೆ ಭೀಮಯ್ಯನವರ ಮೂಲಕ ಅನಾಯಾಸವಾಗಿ ಒದಗಿತ್ತು. ಅವನ ತಂದೆಯೂ ಇಂಜಿನಿಯರು. ಸರ್ಕಾರಿ ಕೆಲಸದಲ್ಲಿದ್ದವರು. ತೀರ ಹತ್ತಿರದವರ ಮನೆಗಳಿಗೆ ಮಾತ್ರ ವಿನ್ಯಾಸ ಮಾಡಿಕೊಡುತ್ತಿದ್ದರು. ಅವರು ಮಾಡಿದ ಒಂದೊಂದು ಕಟ್ಟಡವೂ ತನ್ನದೇ ಆಕರ್ಷಣೆಯಿಂದ ಸೆಳೆಯುತ್ತಿತ್ತು. ಹಾಗೆಯೇ ಈ ಸಂತೋಷನೂ. ತಂದೆಗಿಂತ ಒಂದು ಹೆಜ್ಜೆ ಮುಂದೆ. ಒಂದು ಕಟ್ಟಡವು ರೂಪ ಪಡೆಯುವಾಗ ಅವನೊಳಗೆ ತೀವ್ರ ಹುಚ್ಚೊಂದು ಆವಾಹಿಸಿಕೊಂಡ ಹಾಗಿರುತ್ತಿತ್ತು. ಅದನ್ನು ರಾಮಚಂದ್ರ ಎಷ್ಟೋ ಸಾರ್ತಿ ನೋಡಿದ್ದಾನೆ. ಆ ಕಟ್ಟುವಿಕೆಗಳಲ್ಲಿ ಸಂತೋಷನು ಪೂರ್ತಿಯಾಗಿ ಮುಳುಗೇಳುವುದನ್ನು, ಅವನ ಹರಡಿದ ಭದ್ರ ಹೆಗಲು, ಮಾಂಸಖಂಡ ಹುರಿಗೊಂಡ ತೋಳು ಎಲ್ಲದರಲ್ಲೂ ಅನೂಹ್ಯ ಆತ್ಮವಿಶ್ವಾಸ ತುಳುಕಾಡುವುದನ್ನು, ಇದೇ ಗುಣವು ಅವನು ಕಟ್ಟುತ್ತಿದ್ದ ಕಟ್ಟಡಗಳಿಗೂ ಸೋಂಕಿನಂತೆ ಹರಡುವುದನ್ನು ರಾಮಚಂದ್ರ ಹಲವು ಬಾರಿ ಅನುಭವಿಸಿದ್ದಾನೆ, ಸಂತೋಷ ಪಟ್ಟಿದ್ದಾನೆ. ಸ್ವತಃ ತಾನೂ ಒಬ್ಬ ಕಂಟ್ರಾಕ್ಟರ್ ಆಗಿ ಸಂತೋಷನ ಕೆಲಸ ನೋಡಿ ಕೆಲವೊಂದು ಸಮಯ ಅಸೂಯೆಯನ್ನೂ ಅನುಭವಿಸಿದ್ದಾನೆ. ಏನೆಲ್ಲ ನೆನಪುಗಳು ರಾಮಚಂದ್ರನನ್ನು ಇರಿಯತೊಡಗಿ, ಕಾರು ಓಡಿಸುತ್ತಿದ್ದ ಅವನಿಗೆ ಕಾಲಿನ ನಿಯಂತ್ರಣವೇ ತಪ್ಪಿ ಹೋದ ಹಾಗನ್ನಿಸಿತು. ಕಾರನ್ನು ನಿಲ್ಲಿಸಿದ ರಾಮಚಂದ್ರ, ರಸ್ತೆಯ ಪಕ್ಕದಲ್ಲಿ ಕಾರು ಹಾಕಿ ಸಿಗರೇಟು ಹಚ್ಚಿದ. ಅವನು ತನ್ನ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಳ್ಳಲು ಹೆಣಗಾಡುತ್ತಿರುವುದನ್ನು ಕುಸುಮ ಅಸಹಾಯಕಳಾಗಿ ನೋಡಿದಳು.

ಮತ್ತೆ ಕಾರು ಚಲಿಸಿತು. ರಾಮಚಂದ್ರನ ಮನೆಯಿಂದ ಸಂತೋಷನ ಮನೆಗೆ ಹತ್ತು ನಿಮಿಷದ ದಾರಿ. ಆದರೆ, ಅಂದು ಆ ದಾರಿ ಕ್ರಮಿಸಿದಷ್ಟೂ ಬೆಳೆಯುತ್ತಲೇ ಇದ್ದಂತೆ ರಾಮಚಂದ್ರನಿಗೆ ತೋರಿತು. ಒಂದೊಂದು ಕ್ಷಣವೂ ಅವನಿಗೆ ಯಾರೋ ಎದೆಯ ಮೇಲೆ ಕುಳಿತು ಉಸಿರನ್ನು ಒಳಕ್ಕೆ ಅದುಮಿದ ಅನುಭವ. ತಾನು ಕಂಟ್ರಾಕ್ಟ್ ಕೆಲಸ ಶುರು ಮಾಡಿದಾಗ ಸಂತೋಷ ಎಷ್ಟು ಖುಷಿಪಟ್ಟಿದ್ದ, ಇಟ್ಟಿಗೆ, ಮರಳು ಇತ್ಯಾದಿ ಕೊರತೆ ಬಿದ್ದಾಗ ತಕ್ಷಣ ಒದಗಿಸಿಕೊಟ್ಟಿದ್ದ, ಹಣಕಾಸಿನ ನೆರವು ನೀಡಿದ್ದ... ರಾಮಚಂದ್ರನ ಎದೆಯನ್ನು ಒದ್ದುಕೊಂಡು ಬರುತ್ತಿದ್ದ ನೆನಪುಗಳ ಹಿಂದೆ ನೂರಾರು ಪ್ರಶ್ನೆಗಳು... ಯಾಕೆ ಹೀಗಾಯ್ತು? ಸಂತೋಷನಿಗೆ ಅದೇನು ಸಾಯುವ ವಯಸ್ಸೆ? ಮೂವತ್ತೆಂಟು ವರ್ಷ. ಎಂಟನೇ ಕ್ಲಾಸು ಓದುತ್ತಿರುವ ಮಗ. ಎಂಬತ್ತು ವಯಸ್ಸು ದಾಟಿದ ಅಪ್ಪ, ಎಪ್ಪತ್ತು ವಯಸ್ಸಿನ ಅಮ್ಮ, ಚಿಕ್ಕವಯಸ್ಸಿನ ಹೆಂಡತಿ, ಇವರೆಲ್ಲರ ದುಃಖದ ಕತೆಯೇನು? ಅಂತೆಲ್ಲ ಅಂದುಕೊಳ್ಳುತ್ತಿರುವಷ್ಟರಲ್ಲಿ ಸಂತೋಷನ ಮನೆ ಬಂದಿತ್ತು. ಮನೆ ಮುಂದೆ ನೂರಾರು ಜನ ಸೇರಿದ್ದರು. ಮನೆ ಎದುರಿನ ಪಾರ್ಕು, ಆ ಕಡೆ ಈ ಕಡೆ ರಸ್ತೆಯಲ್ಲೆಲ್ಲ ಜನ ಜನ ಜನ. 'ಅಯ್ಯೋ! ಇಷ್ಟು ಚಿಕ್ಕ ವಯಸ್ಸಿಗೆ ಹೀಗಾಯ್ತಲ್ಲ...', 'ಎಷ್ಟು ಒಳ್ಳೆ ಹುಡುಗ... ಛೇ!', 'ದೇವರು ಎಲ್ಲಿದ್ದಾನೋ ಏನೋ...' — ಬರೀ ಇಂತವೇ ಮಾತುಗಳು ಸುತ್ತಮುತ್ತ. ಸಂತೋಷ ಮಲಗಿದ್ದ. ನಿರುಮ್ಮಳ. ಮುಖದಲ್ಲಿ ಪ್ರಶಾಂತ ನಗು. ಸಂತೋಷದಲ್ಲೆ ಸಾವನ್ನು ಬರಮಾಡಿಕೊಂಡಂತೆ ಇತ್ತು ಅವನ ಇರವು.

ಗಂಟೆಗಳು ಉರುಳಿದವು. ಬಸವಳಿದಿದ್ದ ಗಂಡನನ್ನು ಕುಸುಮ ಬಲವಂತವಾಗಿ ಹೊರಡಿಸಿಕೊಂಡು ಬಂದಳು. ಅವಳ ಮನಸ್ಸೂ ಕದಡಿದ ಕೊಳವಾಗಿತ್ತು.